ಓ ಎಸ್ ನಂ. 101/2019

ಡಿ ಡಬ್ಲು 1

ದಿನಾಂಕ 08-08-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ ಎಂ ಒ ಜೆ ವಕೀಲರಿಂದಃ</u>

5. ದಾವಾ ಶೆಡ್ಯೂಲ್ ಆಸ್ತಿಗಳು ಚೌಕಕಾರದಲ್ಲಿ ಇರುವುದಿಲ್ಲ ಅವು ವಕ್ರರೇಖೆಯಲ್ಲಿರುತ್ತವೆ ಎಂದರೆ ಸರಿ. ನನಗೆ ಸೇರಿದ ಸರ್ವೆ ನಂ.175 ರ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದುಹೋಗಿದೆ ಎಂದರೆ ಸರಿ. ಅದೇರೀತಿ ವಾದಿಯ ಸರ್ವೆ ನಂ.176 ರ ಜಮೀನಿನ ಪಶ್ಚಿಮದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದುಹೋಗಿದೆ ಎಂದರೆ ಸರಿ. ಸರ್ವೆ ನಂ.175 ಮತ್ತು 176 ರಲ್ಲಿ ರಾಷ್ಟ್ರೀಯ ಹೆದ್ದಾರಿಗಾಗಿ ಎಷ್ಟು ಎಷ್ಟು ವಿಸ್ತೀರ್ಣದ ಸ್ವತ್ತನ್ನು ಭೂ ಸ್ವಾಧೀನ ಪಡಿಸಲಾಗಿದೆ ಎಂಬ ಅಂಶವನ್ನು ಮಾನ್ಯ ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಿ ತಿಳಿದುಕೊಳ್ಳಬಹುದು ಎಂದರೆ ಸರಿ. ವಾದಿ ಕ್ರಯಕ್ಕೆ ಪಡೆದುಕೊಂಡ ಸರ್ವೆ ನಂ.176 ರ ಪೂರ್ವದಲ್ಲಿ ವಾದಿಗೆ ಸೇರಿದ ಮತ್ತೊಂದು ಸ್ವತ್ತು ಇದೆ ಎಂದರೆ ಸರಿ. ಸದರಿ ಸ್ವತ್ತನ್ನು ಖರೀದಿಸಿದ ನಂತರದಲ್ಲಿ ಸರ್ವೆ ನಂ.176 ರ ಪಶ್ಚಿಮ ದಿಕ್ಕಿಗೆ ನನಗೆ ಸೇರಿದ ಸರ್ವೆ ನಂ.175 ರ ಸ್ವತ್ತು ಬರುತ್ತದೆ ಎಂದರೆ ಸರಿ. ವಾದಿಗೆ ಸೇರಿದ ಸರ್ವೆ ನಂ.176 ರ ಜಮೀನಿನ ದಕ್ಷಿಣಕ್ಕೆ ಶಿವಕುಮಾರ್ ಶೆಟ್ಟಿರವರ ಸ್ವತ್ತು ಇದೆ ಎಂದರೆ ಸರಿ. ಸರ್ವೆ ನಂ.176 ರ ಜಮೀನಿನ ಉತ್ತರಕ್ಕೆ ರಾಮಚಂದ್ರು ರವರ ಸ್ವತ್ತು ಇದೆ

ಎಂದರೆ ಸರಿ. ಮೇಲ್ಕಂಡ ಚಕ್ಕುಬಂದಿ ಪ್ರಕಾರ ವಾದಿ ರುದ್ರಮ್ಮ ಸರ್ವೆ ನಂ.176 ರ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ.

**6.** ನಾನು ಸ್ವಾಧೀನದಲ್ಲಿರುವ ಸರ್ವೆ ನಂ.175 ರ ಜಮೀನಿನ ಪೂರ್ವಕ್ಕೆ ರುದ್ರಮ್ಮರವರ ಜಮೀನು, ಪಶ್ಚಿಮಕ್ಕೆ ನನಗೆ ಸೇರಿದ ಸರ್ವೆ ನಂ.177 ರ ಜಮೀನು, ದಕ್ಷಿಣಕ್ಕೆ ವಿಶ್ವಕರ್ಮ ಸಂಘಕ್ಕೆ ಸೇರಿದ ಸ್ವತ್ತು ಮತ್ತು ಉತ್ತರಕ್ಕೆ ಬೀರೂರು ಕಾವಲು ಸ್ವತ್ತುಗಳು ಬರುತ್ತವೆ ಎಂದರೆ ಸರಿ. ಮೇಲ್ಕಂಡ ಚಕ್ಕುಬಂದಿಯಲ್ಲಿ ಬರುವ 3 ಎಕರೆ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ ಎಂದರೆ ಸರಿ. ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.